[Govt. of Karnataka C.R.P. 67]

| |
|---|
| Deposition Sheets<br>(RP.No.57)<br>Form No.4 (Civil) |

**IN THE COURT OF CIVIL JUDGE & J.M.F.C., KARKALA.**

**FDP No. 39/2011**

.................................................Vs.....................................

ಸಾಕ್ಷಿದಾರನ ಹೆಸರು ಃ ರತ್ನಾರಾಜ್

ತಂದೆಯಃ ಚಂದ್ರರಾಜ್ ಸಿ.ಡಬ್ಲ್ಯೂಃ 1

ಪ್ರಾಯ ಃ 62 ವರ್ಷ

ಉದ್ಯೋಗ ಃ ವಕೀಲರು

ವಾಸ ಃ ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 18.02.2025

ಮುಖ್ಯ ವಿಚಾರಣೆಃ ನ್ಯಾಯಾಲಯದ ಪರವಾಗಿಃ

ನಾನು ನ್ಯಾಯಾಲಯದ ಆಯುಕ್ತರಾಗಿ ನೇಮಕವಾಗಿದ್ದು, ನ್ಯಾಯಾಲಯದಿಂದ ಹೊರಡಿಸಿದ ವಾರೆಂಟನ್ನು ಸ್ವೀಕರಿಸಿ ದಾವಾ ಸ್ವತ್ತನ್ನು ಪ್ರಾಥಮಿಕ ಡಿಕ್ರಿಯಂತೆ ಸರ್ವೆಯರ್ ಸಹಾಯದಿಂದ ವಿಭಾಗ ಮಾಡಿ, ಸದರಿ ವಾರೆಂಟಿನೊಂದಿಗೆ ನನ್ನ ವರದಿ ಹಾಗೂ ನಕಾಶೆಯನ್ನು ಹಾಜರುಪಡಿಸಿರುತ್ತೇನೆ. ನಾನು ನೀಡಿದ ವರದಿಯನ್ನು ನಿಸಿ-1 ಎಂದು, ನಕಾಶೆಯನ್ನು ನಿಸಿ-2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 2 ಮತ್ತು 5 ನೇ ಎದುರುದಾರರ ಪರಃ ಶ್ರೀ ಕೆ ಎನ್ ಹೆಚ್ ವಕೀಲರಿಂದಃ

ದಾವಾ ಸ್ಥಿರಾಸ್ತಿಗೆ ಪಿತ್ಲಾಯಿ ಡ್ಯಾಮ್ ನಿಂದ ನೀರಾವರಿ ವ್ಯವಸ್ಥೆ ಇದೆ ಎಂದರೆ ನಾನು ಅದನ್ನು ನೋಡಿರುವುದಿಲ್ಲ ಮತ್ತು ನನಗೆ ಯಾರು ತಿಳಿಸಿರುವುದಿಲ್ಲ. ದಾವಾ ಸ್ಥಿರಾಸ್ತಿಯಲ್ಲಿ 4 ಅಡಿ ಅಗಲದ ನೀರು ಹರಿಯುವ ತೋಡು ಇದೆ ಎಂದರೆ ನಾನು ಅದನ್ನು ನೋಡಿರುವುದಿಲ್ಲ. ಆದರೆ ಸ್ಪಿಂಕ್ಲರ್ ನೀರಾವರಿ ಇದೆ. ದಾವಾ ಸ್ಥಿರಾಸ್ತಿಯಲ್ಲಿ ನೀರು ಹರಿಯುವ ತೋಡು ಇದ್ದರು

ಗುರುತಿಸದೆ ಪಾಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ಥಿರಾಸ್ತಿಗೆ ಭೂತದ ಕಟ್ಟೆ ಮತ್ತು ನಾಗನ ಬನ ಇದ್ದ ಬಗ್ಗೆ ನನಗೆ ಈಗ ನೆನಪು ಬರುವುದಿಲ್ಲ. ದಾವಾ ಸ್ಥಿರಾಸ್ತಿಯಲ್ಲಿ ಗುಳಿಗ ಭೂತದ ಕಟ್ಟೆ ಮತ್ತು ನಾಗನ ಬನ ಇದೆ ಎಂದರೆ ಸರಿಯಲ್ಲ. ಭೂತದ ಕಟ್ಟೆ ಮತ್ತು ನಾಗನ ಬನ ಪ್ರತ್ಯೇಕಿಸದೆ ವಿಭಾಗ ಮಾಡಿದ್ದೀರಿ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು 5 ನೇ ಪ್ರತಿವಾದಿ ಗೆ ತನ್ನ ಪಾಲನ್ನು ಹಕ್ಕುಖುಲಾಸೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನನಗೆ ಹಕ್ಕುಖುಲಾಸೆ ಪತ್ರ ನೀಡಿರುತ್ತಾರೆ 2 ನೇ ಎದುರುದಾರರ ಜಾಗವನ್ನು ಪ್ರತ್ಯೇಕಿಸಿರುತ್ತೇನೆ. ನಿಸಿ-2 ರ ಎಫ್ ಶೆಡ್ಯೂಲ್ ನ ಪೂರ್ವ ಬದಿಯಲ್ಲಿ ತೋರಿಸಿದ ರಸ್ತೆ ಪೂರ್ವ ಬದಿಯಲ್ಲಿರುವ ಮಣ್ಣಿನ ರಸ್ತೆಗೆ ಸೇರುತ್ತದೆ . ದಾವಾ ಆಸ್ತಿಯಲ್ಲಿ 3 ಮನೆ ಇದೆ. 5 ನೇ ಎದುರುದಾರರ ತಾಯಿಯ ಜೊತೆ ವಾಸವಾಗಿದ್ದರು. ಮನೆಯ ಒಳಗೆ ಏನುನು ಇದೆ ಎಂದು ನಾನು ನೋಡಿರುವುದಿಲ್ಲ ಹಾಗೂ ಭೂತದ ಮಂಚ ಇರುವುದನ್ನು ನೋಡಿರುವುದಿಲ್ಲ. ಸಮಷ್ಟಿ ಹಕ್ಕಿನ ದೈವಸ್ಥಾನ ಮತ್ತು ನಾಗಬನ ಕ್ಕೆ ಜಾಗವನ್ನು ಪ್ರತ್ಯೇಕಿಸದೆ ಮಾಡಿರುವ ವಿಭಾಗ ಸರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಸಿ-1 ಮತ್ತು 2 ಸರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಪುನಃ ದಾವಾ ಅಸ್ತಿಗೆ ಭೇಟಿ ನೀಡಿ ಅಳತೆ ಮಾಡಿ ವರದಿ ಹಾಗೂ ನಕಾಶೆಯನ್ನು ಸಲ್ಲಿಸಬೇಕಾಗುತ್ತದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಅರ್ಜಿದಾರರ ಪರಃ ಶ್ರೀ ವಿ ಕೆ ಆರ್ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲಿಗೆ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ